**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 6/2023** **ಅ.ಸಾ.8**

**ಚಾ.ಸಾ.14**

| | | |
|---|---|---|
| ಸಾಕ್ಷಿದಾರರ ಹೆಸರು | - | ಈರಣ್ಣ |
| ತಂದೆಯ ಹೆಸರು | - | ದಾನಪ್ಪ |
| ವಯಸ್ಸು | - | 40 ವರ್ಷ |
| ಉದ್ಯೋಗ | - | ಅಕ್ಕಸಾಲಿಗ |
| ವಿಳಾಸ | - | ಬಿಜಾಪುರ ಜಿಲ್ಲೆ, ಬಾಗಲಕೋಟೆ ರಸ್ತೆ. |

ದಿನಾಂಕಃ 20-01-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ**

ಈ ಪ್ರಕರಣದ ಮೃತ ಪ್ರಭಾಕರ ಶಂಕರ ಪೋದಾರ್ ನನ್ನ ಅಕ್ಕನ ಗಂಡ ಮತ್ತು ಅವರ ಮಗ ಸಮರ್ಥ ಪೋದಾರ್ ನನ್ನ ಅಕ್ಕನ ಮಗ. ಮೃತ ಸಮರ್ಥ ಪೋದಾರ್ ಉಡುಪಿಯಲ್ಲಿ ಓದುತ್ತಿದ್ದು ಕಾಪುವಿನ ಆನೆಗುಂದಿ ಮಠದಲ್ಲಿ ಉಳಿದುಕೊಳ್ಳುತ್ತಿದ್ದ. ಸುಮಾರು ಒಂದುಾವರೆ ವರ್ಷದ ಹಿಂದೆ ಮೃತ ಪ್ರಭಾಕರ ಶಂಕರ ಪೋದಾರ್ ಆತನ ಮಗ ಸಮರ್ಥ ಪೋದಾರ್ ಇವರನ್ನು ಉಡುಪಿಗೆ ಬಿಟ್ಟು ಬರಲು ಬಂದಿರುತ್ತಾರೆ. ದಿನಾಂಕ 14-09-2022 ರಂದು ಬೆಳಿಗ್ಗೆ ನಾನು ಪ್ರಭಾಕರ ಶಂಕರ ಪೋದಾರ್ ಇವರ ಮೊಬೈಲ್ ಗೆ ಕರೆ ಮಾಡಿದಾಗ ಪೋಲಿಸರು ಆ ಕರೆಯನ್ನು ಸ್ವೀಕರಿಸಿದ್ದು ವಿಚಾರಿಸಲಾಗಿ, ಮೃತ ಪ್ರಭಾಕರ ಶಂಕರ ಪೋದಾರ್ ಮತ್ತು ಸಮರ್ಥ ಪೋದಾರ್ ಇವರಿಗೆ ಉಡುಪಿಯಲ್ಲಿ ರಸ್ತೆ ಅಪಘಾತವಾಗಿದೆ ಎಂದು ತಿಳಿಸಿದ್ದು ಪ್ರಭಾಕರ ಪೋದಾರ್ ಮೃತಪಟ್ಟಿದ್ದು ಹಾಗೂ ಸಮರ್ಥ ಉಡುಪಿಯ ಆದರ್ಶ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ ಎಂದು ತಿಳಿಸಿದ್ದು ಮಾರನೆಯ ದಿನ ನಾನು ಉಡುಪಿಗೆ ಬಂದು ಸರಕಾರಿ ಆಸ್ಪತ್ರೆಯಲ್ಲಿದ್ದ ಮೃತ ದೇಹಗಳನ್ನು ನೋಡಿರುತ್ತೇನೆ. ವಿಚಾರ ತಿಳಿಯಲಾಗಿ, ಮೃತ ಪ್ರಭಾಕರ ಶಂಕರ ಪೋದಾರ್ ಮತ್ತು ಸಮರ್ಥ ಪೋದಾರ್ ಇವರುಗಳು ಕಾಪು ಬಡಾ ಗ್ರಾಮದ ಉಚ್ಚಿಲ ಇಂಗ್ಲೀಷ್ ಮೀಡಿಯಂ ಶಾಲೆಯ ಬಳಿ ರಾಷ್ಟ್ರೀಯ ಹೆದ್ದಾರಿಯ ಮಣ್ಣು ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿರುವಾಗಿ ಗೂಡ್ಸ್ ಲಾರಿ

ಒಂದು ಅವರುಗಳಿಗೆ ಡಿಕ್ಕಿ ಹೊಡೆದಿರುವುದರಿಂದ ಮೃತಪಟ್ಟಿರುತ್ತಾರೆ ಎಂದು ತಿಳಿದು ಬಂತು. ಸದ್ರಿ ಲಾರಿಯನ್ನು ಆರೋಪಿ ಶೇಖರಪ್ಪ ಈತನ ಸೂಚನೆಯ ಮೇರೆಗೆ ವಿನಾಯಕ ಎಂಬ ವ್ಯಕ್ತಿ ಅತೀ ವೇಗ ಮತ್ತು ಅಜಾಗರೂಕತೆಯಿಂದ ಮಣ್ಣು ರಸ್ತೆಯಲ್ಲಿ ಚಲಾಯಿಸಿರುವುದರಿಂದ ಈ ಅಪಘಾತವಾಗಿರುತ್ತದೆ ಎಂದು ಗೊತ್ತಾಯಿತು. ಈ ಬಗ್ಗೆ ಮೃತ ಪ್ರಭಾಕರ ಶಂಕರ ಪೋದಾರ್ ಇವರ ಮೃತ ದೇಹದ ಶವ ತನಿಖೆ ಕಾಲದಲ್ಲಿ ಪೋಲಿಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ದಾಖಲಿಸಿಕೊಂಡಿರುತ್ತಾರೆ.

**ಆರೋಪಿ ಪರವಾಗಿ ಪಾಟೀ ಸವಾಲುಃ ಶ್ರೀ ಎಸ್.ಬಿ. ವಕೀಲರಿಂದಃ**

ನನ್ನ ಫೋನ್ ಕರೆ ಸ್ವೀಕರಿಸಿದ ವ್ಯಕ್ತಿಯ ಹೆಸರು ಗೊತ್ತಿಲ್ಲ. ಪೋಲಿಸರು ನನ್ನನ್ನು ವಿಚಾರಣೆ ಮಾಡಿಲ್ಲ ಎಂದರೆ ಸರಿಯಲ್ಲ. ಅವರು ಹೆಸರು ಗೊತ್ತಿಲ್ಲ.

**ಮರು ವಿಚಾರಣೆಃ** ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ದಿನೇಶ್ ಹೆಗ್ಡೆ)
ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.